# ಜನಗನ್ನಡದ ಸ್ವಪ್ನಮಂಟಪ





'ಸಿರಿಗನ್ನಡಂ ಗೆಲ್ಗೆ' ಕನ್ನಡಿಗರ ಹೃದಯದ ಉದ್ಗಾರ. ಈ ಸಿರಿಗನ್ನಡವನ್ನು 'ಜನಗನ್ನಡ' ಎಂದು ಕರೆದಿದ್ದಾರೆ ಪ್ರೊ. ಬರಗೂರು ರಾಮಚಂದ್ರಪ್ಪ. ಕನ್ನಡ ನುಡಿಗೆ ಜನಪರತೆಯನ್ನು ಕಸಿ ಮಾಡುವಂತಿರುವ 'ಜನಗನ್ನಡ'ದ ಪರಿಕಲ್ಪನೆ ಬಳಕೆಯಾಗಿರುವುದು 'ಸ್ವಪ್ನಮಂಟಪ' ಸಿನಿಮಾದ ಗೀತೆಯೊಂದರಲ್ಲಿ.

ನಾಡು–ನುಡಿಯ ಹಿರಿಮೆಯನ್ನು ಸಾರುವ ಕನ್ನಡಗೀತೆಗಳ ಪರಂಪರೆಯೊಂದು ಕನ್ನಡ ಸಿನಿಮಾದಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ನೇಪಥ್ಯಕ್ಕೆ ಸರಿದಂತಿದ್ದ ಈ ಪರಂಪರೆಯನ್ನು ಮುಂದುವರೆಸುವ ಹಂಬಲದ ರೂಪದಲ್ಲಿ 'ಸ್ವಪ್ನಮಂಟಪ'ದ ಗೀತೆಯನ್ನು ಗುರ್ತಿಸಬಹುದು. ಕಾದಂಬರಿ ಆಧರಿಸಿದ್ದು ಎನ್ನುವುದು ಸಿನಿಮಾದ ಮತ್ತೊಂದು ವಿಶೇಷ. ಇಪ್ಪತ್ತೈದು ವರ್ಷಗಳ ಹಿಂದೆ 'ಸುಧಾ'ದಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿದ್ದ ಕಾದಂಬರಿ ಈಗ ದೃಶ್ಯಮಾಧ್ಯಮದ ರೂಪಾಂತರದ ಸವಾಲಿಗೆ ತನ್ನನ್ನೊಡ್ಡಿಕೊಂಡಿದೆ.

ನುಡಿ ಹಿರಿಮೆಯ ಕಾರಣದಿಂದಾಗಿ ಮಾತ್ರವಲ್ಲ, ಕಥನದ ಕಾರಣದಿಂದಲೂ 'ಸ್ವಪ್ನಮಂಟಪ' ಕುತೂಹಲ ಹುಟ್ಟಿಸುವಂತಿರುವ ಸಿನಿಮಾ. ನಿರ್ದೇಶಕರು ಹೇಳುವಂತಿದು, 'ಚಾರಿತ್ರಿಕ ಸ್ಮಾರಕಗಳ ಸಂರಕ್ಷಣೆಯ ಮಹತ್ವವನ್ನು ಸಿನಿಮಾದ ಕಥೆ ಪ್ರತಿಪಾದಿಸುವ ಸಿನಿಮಾ.'

ಚಿತ್ರದ ನಾಯಕ ಚರಿತ್ರೆಯಲ್ಲಿ ಆಸಕ್ತ. ನಾಯಕಿ ಸಮಾಜ ವಿಜ್ಞಾನದಲ್ಲಿ ಕುತೂಹಲಿ. ಇಬ್ಬರ ಆಸಕ್ತಿ ಆಶಯಗಳು ಜನಪರವಾಗಿ ವಿಸ್ತರಣೆಗೊಳ್ಳುವ ಕಥೆ ಚಿತ್ರದಲ್ಲಿದೆ. ಸ್ವಪ್ನಗಳನ್ನು ಕರುಣಿಸುವ ಮಂಟಪ ಎಂದು ಜನರು ನಂಬಿರುವ ಸ್ಮಾರಕವೊಂದನ್ನು ನಾಶಗೊಳಿಸಲು ಪ್ರಯತ್ನಿಸುವವರ ವಿರುದ್ಧ ಜನಾಭಿಪ್ರಾಯ ರೂಪಿಸುವ 'ಸ್ವಪ್ನಮಂಟಪ', ಸ್ಮಾರಕಗಳ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಉದ್ದೇಶ ಹೊಂದಿದೆ.

ವರ್ತಮಾನದ ಕಥೆಯೊಂದಿಗೆ, ಫ್ಲ್ಯಾಶ್‌ಬ್ಯಾಕ್‌ನಲ್ಲಿ ರಾಜನ ಕಥೆಯೊಂದನ್ನು ನಿರೂಪಿಸುವ ಪ್ರಯತ್ನವನ್ನು 'ಕಾಲ್ಪನಿಕ ವಾಸ್ತವದ ಮೇಲೆ ಕಟ್ಟಿರುವ ಕಥೆಯ ಸಿನಿಮಾ' ಎಂದು ನಿರ್ದೇಶಕರು ಬಣ್ಣಿಸುತ್ತಾರೆ. ಅಂದಹಾಗೆ, ಇದು ಬರಗೂರು ರಾಮಚಂದ್ರಪ್ಪನವರ ನಿರ್ದೇಶನದ ಇಪ್ಪತ್ತನಾಲ್ಕನೇ ಸಿನಿಮಾ. ಈ ಸಂಖ್ಯೆಯೇ, ಜನಪರ ಸಿನಿಮಾಗಳ ಆಂದೋಲನವೊಂದನ್ನು ತಮ್ಮಷ್ಟಕ್ಕೆ ತಾವು ರೂಪಿಸಿ ಮುನ್ನಡೆಸಿಕೊಂಡು ಸಾಗುತ್ತಿರುವ ನಿರ್ದೇಶಕನ ಸಾಮರ್ಥ್ಯ ಹಾಗೂ ಸಾಧನೆಯೊಂದನ್ನು ಹೇಳುವಂತಿದೆ.

ತೆರೆ ಕಾಣಲು ಸಿದ್ಧತೆ ನಡೆಸಿರುವ, ಎ.ಎಂ. ಬಾಬು ನಿರ್ಮಾಣದ 'ಸ್ವಪ್ನಮಂಟಪ' ಸಿನಿಮಾದ ಹಾಡುಗಳನ್ನು ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ. ಪಾಟೀಲ್ ಬಿಡುಗಡೆ ಮಾಡಿದರು. ಆ ಸಂದರ್ಭದಲ್ಲಿ, ಶಮಿತಾ ಮಲ್ನಾಡ್ ಅವರ ಸ್ವರ ಸಂಯೋಜನೆಯ ಗೀತೆಗಳ ಪ್ರದರ್ಶನವೂ ನಡೆಯಿತು. 'ಇಬ್ಬರ ಮನಸಲಿ ಒಬ್ಬರ ಕನಸು/ ಪ್ರೇಮದ ಮಲ್ಲಿಗೆ ಅರಳಿದ ಸೊಗಸು' ಎನ್ನುವ ಗೀತೆ, ಸ್ಮಾರಕಗಳ ಸಂರಕ್ಷಣೆಯ ಕಥನದಲ್ಲಿ ಇರಬಹುದಾದ ಪ್ರೇಮದ ನರುಗಂಪಿನ ಸೂಚನೆ ನೀಡುವಂತಿತ್ತು. ಸುರೇಶ್ ಅರಸ್ ಸಂಕಲನ, ನಾಗರಾಜ ಆದವಾನಿ ಛಾಯಾಗ್ರಹಣ ಚಿತ್ರಕ್ಕಿದೆ.

ವಿಜಯ ರಾಘವೇಂದ್ರ ಹಾಗೂ ರಂಜನಿ ರಾಘವನ್ ಚಿತ್ರದ ನಾಯಕ–ನಾಯಕಿ. ಸುಂದರರಾಜ್ ತಾರಾಗಣದಲ್ಲಿ ಎದ್ದುಕಾಣುವ ಹಿರಿಯ ಕಲಾವಿದ. ಕಿರುತೆರೆಯಲ್ಲಿ ಕನ್ನಡ ಅಧ್ಯಾಪಕಿಯ ಪಾತ್ರದಲ್ಲಿ ಜನಮನ್ನಣೆ ಗಳಿಸಿದ್ದ ರಂಜನಿ 'ಸ್ವಪ್ನಮಂಟಪ'ದಲ್ಲೂ ಶಿಕ್ಷಕಿ. 'ಶಾಲೆಗೆ ಹೋಗಿಬಂದ ಅನುಭವವನ್ನು ಈ ಸಿನಿಮಾ ನೀಡಿತು' ಎನ್ನುವ ಅವರಿಗೆ, ಚಿತ್ರತಂಡದ ಭಾಗವಾಗಿ ಗುರ್ತಿಸಿಕೊಳ್ಳುವುದಕ್ಕೆ ಹೆಮ್ಮೆ. ಅಭಿನಯದ ಜೊತೆಗೆ, 'ಜನಗನ್ನಡಂ ಗೆಲ್ಗೆ' ಗೀತೆಯನ್ನು ಹಾಡುವ ಮೂಲಕ ಈ ಚಿತ್ರದಲ್ಲಿ ಗಾಯಕನ ಪಾತ್ರವನ್ನೂ ವಿಜಯ ರಾಘವೇಂದ್ರ ನಿರ್ವಹಿಸಿದ್ದಾರೆ.